ದಿನಾಂಕ: 14-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. ಪ್ರತಿವಾದಿ 1 ರಿಂದ 5, 9 ರಿಂದ 12 ರವರ ಪರ ವಕೀಲರಿಂದಃ**

ಪಾಟೀಸವಾಲು ಏನು ಇಲ್ಲ ಎಂದು ಹೇಳುತ್ತಾರೆ.

**ಪಾಟೀಸವಾಲುಃ ಶ್ರೀ.ಎಸ್.ಬಿ.ಕೆ. ಪ್ರತಿವಾದಿ 6 ರಿಂದ 8 ರವರ ಪರ ವಕೀಲರಿಂದಃ**

ಪ್ರತಿವಾದಿ 6 ರಿಂದ 8 ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. ಪ್ರತಿವಾದಿ 13 ರಿಂದ 15 ರವರ ಪರ ವಕೀಲರಿಂದಃ**

ದಾವಾ ಆಸ್ತಿ ಕ್ರ.ಸಂ.2 ಮತ್ತು 3 2020-21ನೇ ಸಾಲಿನಲ್ಲಿ ಪ್ರತಿವಾದಿ 7 ಮತ್ತು 8 ರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸದರಿ ಆಸ್ತಿಗಳಿಗೆ ನನ್ನ, ಉಳಿದ ವಾದಿಯರ ಹಾಗೂ ಪ್ರತಿವಾದಿ 1 ರಿಂದ 6 ರವರ ಹೆಸರು ಯಾವತ್ತೂ ದಾಖಲ ಇರುವುದಿಲ್ಲ. ಪ್ರತಿವಾದಿ 7 ಮತ್ತು 8 ರವರ ವಿಳಾಸ ಮುನ್ನೋಳಿ ಎಂದು ನಾವು ತೋರಿಸಿದ್ದೇವೆ ಎಂದರೆ ಸರಿ. ಸದರಿಯವರು ಕಳೆದ 40 ವರ್ಷಗಳಿಂದ ಅವರ ತಂದೆ ತಾಯಿಯ ಜೊತೆ ಮುನ್ನೋಳಿಯಲ್ಲಿ ವಾಸ ಇದ್ದಾರೆ ಎಂದರೆ ಸರಿ.

2. ಪ್ರತಿವಾದಿ 6 ರವರ ಹೆಂಡತಿಯ ಹೆಸರು ಶಾಂತವ್ವ ಎಂದರೆ ಸರಿ. ಪ್ರತಿವಾದಿ 7 ಮತ್ತು 8 ಇವರು 6ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಪ್ರತಿವಾದಿ 7 ಮತ್ತು 8 ರವರು ಬರೆದುಕೊಟ್ಟ ಖರೀದಿ ಪತ್ರದ ಆಧಾರದ ಮೇಲೆ ಸರ್ವೆ ನಂ.293/4ಬಿ ಮತ್ತು 329/4ಬಿ ಜಮೀನುಗಳ ಉತಾರದಲ್ಲಿ ಪ್ರತಿವಾದಿ 13 ರಿಂದ 15 ರವರ ಹೆಸರು ದಾಖಲ ಇದೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ ಪ್ರತಿವಾದಿ 7 ಮತ್ತು 8 ರವರು ಸರ್ವೆ ನಂ.293/4ಬಿ ಮತ್ತು 329/4ಬಿ ಜಮೀನುಗಳ ಕಬ್ಜೆಯನ್ನು ಪ್ರತಿವಾದಿ 13 ರಿಂದ 15 ರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರವನ್ನು ನಾನು ಹಾಜರ ಮಾಡಿರುತ್ತೇನೆ. ಸದರಿ ಖರೀದಿ ಪತ್ರ ಯಾವ ದಿನಾಂಕದಂದು ಆಗಿದೆ ಎಂದ ನನಗೆ ಹೇಳಲು ಬರುವುದಿಲ್ಲ. ಈಗ ಸಾಕ್ಷಿದಾರರಿಗೆ ತಾವು ಹಾಜರಪಡಿಸಿದ ದಾಖಲೆಗಳನ್ನು ತೋರಿಸಿದ್ದು ಅದರಲ್ಲಿ ಖರೀದಿ ಪತ್ರ ಯಾವುದು ಎಂದು ಪ್ರಶ್ನಿಸಿದರೆ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಖರೀದಿ ಪತ್ರ ಎಷ್ಟು ಮೊತ್ತಕ್ಕೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

3. ಸರ್ವೆ ನಂ.293/4ಬಿ ಮತ್ತು 329/4ಬಿ ಜಮೀನುಗಳು ಮೂಲ ಪುರುಷ ಯಲ್ಲಪ್ಪ ಹಾಗೂ ಅವರ ಮಕ್ಕಳಾದ ಹಣಮಂತ ಮತ್ತು ರಾಮಪ್ಪ ಇವರ ಹೆಸರಿನಲ್ಲಿ ಇದ್ದ ಬಗ್ಗೆ ಪಹಣಿ ಪತ್ರಿಕೆಯನ್ನು ಹಾಜರ ಮಾಡಿದ್ದೇನೆ. ಸದರಿ ಪಹಣಿ ಪತ್ರಿಕೆಗಳು 1952 ರಿಂದ 2019 ರವರೆಗಿನವು ಇರುತ್ತವೆ. ಸದರಿ ಜಮೀನುಗಳ ಉತಾರದಳಲ್ಲಿ ಮಲ್ಲಪ್ಪ ಬೆಣ್ಣಿ ಇವರ ಹೆಸರು ಇದ್ದು, ಅವರ ಹೆಸರು ಕಡಿಮೆಯಾಗಿ ಹಣಮಂತ ಹಟ್ಟಿ ಇವರ ಹೆಸರು ಹತ್ತಿರುತ್ತದೆ. ಯಾವ

ವರ್ಷದಲ್ಲಿ ಹಣಮಂತ ಹಟ್ಟಿ ಇವರ ಹೆಸರು ಹತ್ತಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಎರಡೂ ಜಮೀನುಗಳಿಗೆಯಾವ ಕಾಲಕ್ಕೂ ಹಣಮಂತ ಇವರ ಮಕ್ಕಳಾದ ಪ್ರತಿವಾದಿ 1 ಯಮನಪ್ಪ, ಮೃತ ಉದ್ದಪ್ಪ, ಪ್ರತಿವಾದಿ 6 ಚಂದ್ರಪ್ಪ ಹಾಗೂ ಮೃತ ಬಸಪ್ಪ ಇವರ ಹೆಸರು ಯಾವತ್ತೂ ದಾಖಲ ಆಗಿಲ್ಲ.

4. ಸರ್ವೆ ನಂ.293/4ಬಿ ಹಾಗೂ 329/4ಬಿ ಈ ಎರಡೂ ಜಮೀನುಗಳು ಮಲ್ಲಪ್ಪ ಬಸಪ್ಪ ಬೆಣ್ಣಿ ಇವರು ಮರುಮಂಜೂರಾಗಿದ್ದವು ಎಂದರೆ ಸರಿ. ಮಮದಾಪೂರ ಗ್ರಾಮದ ಡೈರಿ ನಂ.8280 ರ ಪ್ರಕಾರ ಸದರಿ ಎರಡು ಜಮೀನುಗಳಿಗೆ ಮಲ್ಲಪ್ಪ ಬಸಪ್ಪ ಬೆಣ್ಣಿ ಇವರ ಹೆಸರು ದಾಖಲಾಗಿದೆ ಎಂದರೆ ಸರಿ.

5. ಮಲ್ಲಪ್ಪ ಬಸಪ್ಪ ಬೆಣ್ಣಿ ಇವರ ಮರಣ ನಂತರ ಈ ಮೇಲೆ ಹೇಳಿದ ಎರಡು ಜಮೀನುಗಳು ಸುರೇಶ ಅರ್ಜುನ ಬೆಣ್ಣಿ ಇವರ ಹೆಸರು ದಾಖಲಾಗಿತ್ತದೆ ಎಂದರೆ ಸರಿ. ಸದರಿ ಸುರೇಶ ಅರ್ಜುನ ಬೆಣ್ಣಿ ಇವರು ಮಲ್ಲಪ್ಪ ಬಸಪ್ಪ ಬೆಣ್ಣಿ ಇವರ ತಮ್ಮನ ಮಗ ಎಂದರೆ ಸರಿ. ಸುರೇಶ ಅರ್ಜುನ ಬೆಣ್ಣಿ ಇವರು ತಮ್ಮ ಪ್ರಾಪಂಚಿಕ ಅಡಚಣೆಗಾಗಿ ಸರ್ವೆ ನಂ.293/4ಬಿ ಮತ್ತು 329/4ಬಿ ಜಮೀನುಗಳನ್ನು ಪ್ರತಿವಾದಿ 7 ಮತ್ತು 8 ರವರಿಗೆ ದಿಃ 11/03/2014 ರಂದು ನೋಂದಾಯಿ ಖರೀದಿ ಪತ್ರದ ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಪತ್ರದ ಪ್ರಕಾರ 2014 ರಲ್ಲಿ ಎಂ.ಆರ್.ನಂ.114 ರ ಪ್ರಕಾರ ಸದರಿ ಎರಡು ಜಮೀನುಗಳಿಗೆ ಪ್ರತಿವಾದಿ 7 ಮತ್ತು 8 ರವರ ಹೆಸರು ದಾಖಲ

ಆಗಿರುತ್ತದೆ ಎಂದರೆ ಸರಿ. ಖರೀದಿ ಪತ್ರ ಆದ ದಿನಾಂಕದಿಂದ ಪ್ರತಿವಾದಿ 7 ಮತ್ತು 8 ಆ ಎರಡು ಜಮೀನುಗಳ ಕಬ್ಜೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ 7 ಮತ್ತು 8 ರವರನ್ನು ಹೊರತುಪಡಿಸಿ ನಾವು ಮತ್ತು ಪ್ರತಿವಾದಿ 1 ರಿಂದ 6 ಈ ಎರಡೂ ಜಮೀನುಗಳ ಕಬ್ಜೆಯಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ.

6. ದಿನಾಂಕ 20/01/2022 ರಂದು ಪ್ರತಿವಾದಿ 7 ಮತ್ತು 8 ರವರು ಸರ್ವೆ ನಂ.293/4ಬಿ ಜಮೀನನ್ನು ಪ್ರತಿವಾದಿ 13 ಮತ್ತು 14 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ವ್ಯವಹಾರ ರೂ.4,96,000/- ಕ್ಕೆ ಆಗಿದೆ ಎಂದರೆ ಸರಿ.

7. ಪ್ರತಿವಾದಿ 7 ಮತ್ತು 8 ರವರು ದಿನಾಂಕ 16/02/2022 ರಂದು ಸರ್ವೆ ನಂ.329/4ಬಿ ರ 04ಎ-12ಗು ಜಮೀನನ್ನು ಪ್ರತಿವಾದಿ 15 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಎರಡು ಖರೀದಿ ಪತ್ರಗಳ ಪ್ರಕಾರ ಪ್ರತಿವಾದಿ 13 ರಿಂದ 15 ತಾವು ಖರೀದಿ ಮಾಡಿದ ಜಮೀನುಗಳ ಕಬ್ಜೆಯಲ್ಲಿ ಬಂದಿರುತ್ತಾರೆ ಎಂದರೆ ಸರಿ ಹಾಗೂ ಸದರಿಯವರೇ ಎರಡು ಜಮೀನುಗಳ ತೆರಿಗೆ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ 13 ರಿಂದ 15 ರವರು ಆ ಎರಡು ಜಮೀನುಗಳನ್ನು ಖರೀದಿ ಮಾಡಿದ 03 ವರ್ಷಗಳ ನಂತರ ನನಗೆ ಗೊತ್ತಾಗಿರುತ್ತದೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ